**ದಿನಾಂಕಃ28.06.2024 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ ಆರೋಪಿ ಪರ ಶ್ರೀ ಆರ್.ಟಿ.ಎಸ್. ವಕೀಲರಿಂದಃ–**

ಆರೋಪಿ ನನಗೆ ಕರ್ನಾಟಕ ಬ್ಯಾಂಕ್ ಚೆಕ್ ನೀಡಿರುತ್ತಾರೆ. ಆರೋಪಿತರು ನಾನು ನೀಡಿದ ನೋಟೀಸ್‌ಗೆ ಉತ್ತರ ನೀಡಿರುವುದಿಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕಷ್ಟು ಜನರಿಗೆ ಬಡ್ಡಿಗಾಗಿ ಸಾಲ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಲ ನೀಡಿದವರಿಂದ ಭದ್ರತೆಗಾಗಿ ನಾನು ಚೆಕ್‌ಗಳನ್ನು ಪಡೆಯುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನೀಡಿದ ಚೆಕ್‌ನ್ನು ನಾನೇ ತುಂಬಿಕೊಂಡು ಬ್ಯಾಂಕ್‌ಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಚೆಕ್‌ನ್ನು ಹೊರತುಪಡಿಸಿ ನಾನು ಇನ್ನೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತೇನೆ.

ನಿಪಿ–1 ಚೆಕ್‌ನಲ್ಲಿ ಇರುವ ಬರವಣಿಗೆಗೂ ಮತ್ತು ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಿಪಿ–1 ಚೆಕ್‌ನ್ನು ನಾನೇ ಬರೆದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಕೇವಲ ರೂ.25,000/– ಹಣ ಮಾತ್ರ ಪಡೆದಿದ್ದರು ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ರೂ.4,00,000/– ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ರೂ.4,00,000/– ಹಣ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಮೇಲೆ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕೈತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.